ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದವರಿಂದ ಕೊರೆಯಿಸಲಾದ ಕೊಳವೆ ಬಾವಿಗಳು

ವಿಿ) ಶ್ರೀ ಕೆ. ಶಿವಮೂರ್ತಿ (ಭರಮಸಾಗರ) ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ ರೇಷ್ಮೆ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿ ೧-೪-೮೬ರಿಂದ ೨೮-೨-೯೦ರವರೆಗೆ ಕೊರೆಯಲಾಗಿರುವ ಒಟ್ಟು ಕೊಳವೆ ಬಾವಿಗಳೆಷ್ಟು?

ಆ) ಇವುಗಳಲ್ಲಿ ಸುಸ್ಥಿತಿಯಲ್ಲಿರುವ ಕೊಳವೆ ಬಾವಿಗಳೆಷ್ಟು? ದುಸ್ಥಿತಿಯಲ್ಲಿರುವ ಕೊಳವೆ ಬಾವಿಗಳೆಷ್ಟು? ಎಷ್ಟು ಕೊಳವೆ ಬಾವಿಗಳನ್ನು ದುರಸ್ತಿ ಮಾಡಿಸಲಾಗಿದೆ? ದುರಸ್ತಿ ಮಾಡಿದಾಗ್ಯೂ ಸಂಪೂರ್ಣ ಕೆಟ್ಟು ನಿಂತು ಹೋಗಿರುವ ಕೊಳವೆ ಬಾವಿಗಳೆಷ್ಟು?

ಇ) ಯಾವ ಬೋರ್‌ವೆಲ್ ಏಜನ್ಸಿಯಿಂದ ಭಾವಿಗಳನ್ನು ಕೊರೆಯಿಸಲಾಗಿದೆ? ಹಾಗೂ ಯಾವ ಕಂಪನಿಯಿಂದ ಯಂತ್ರಗಳನ್ನು ಖರೀದಿ ಮಾಡಿ ಅಳವಡಿಸಲಾಗಿದೆ? (ಜಿಲ್ಲಾವಾರು ಪಟ್ಟಿಯನ್ನು ಕೊಡುವುದು),

ಈ) ದುರಸ್ತಿಯಾಗದೇ ಸಂಪೂರ್ಣ ಕೆಟ್ಟು ಹೋಗಿರುವಂತಹ ಕೊಳವೆ ಬಾವಿಗಳ ಫಲಾನು ಭವಿಯ ಜವಿನಿನ ಮೇಲೆ ಬ್ಯಾಂಕಿನವರು ನೀಡಿರುವ ಸಾಲದ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಕಾರ್ಮಿಕ, ರೇಷ್ಮೆ ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ೧೪೪೫ ಕೊಳವೆ ಬಾವಿಗಳು.

ಆ) ಸುಸ್ಥಿಯಲ್ಲಿರುವ ಕೊಳವೆ ಬಾವಿಗಳು ಸಂಖ್ಯೆ ೧೩೯೪

ದುಸ್ಥಿತಿಯಲ್ಲಿರುವ ಕೊಳವಿ ಬಾವಿಗಳು ಸಂಖ್ಯೆ ೫೧

ದುರಸ್ತಿ ಮಾಡಲಾಗಿರುವ ಕೊಳವೆ ಬಾವಿಗಳು ಸಂಖ್ಯೆ ೧೭

ದುರಸ್ತಿ ಮಾಡಿದಾಗ್ಯೂ ಸಂಪೂರ್ಣ ಕೆಟ್ಟು ನಿಂತಿರುವ ಕೊಳವೆ ಬಾವಿಗಳು. ೧೭

ಇ) ಈ ಕೆಳಗೆ ನಮೂದಿಸಿದ ಏಜನ್ಸಿಗಳ ಮೂಲಕ ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ (ಜಿಲ್ಲಾವಾರು ಪಟ್ಟಿಯನ್ನು ಅನುಬಂಧಿಸಿದೆ)

ಮೆ. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್,

ಮೆ. ರಿಗ್‌ವೆಲ್ ಎಂಜಿನಿಯರ್ಸ್

ಮೆ. ಕೃಷ್ಣವೇಣಿ ಬೋರ್‌ವೆಲ್ಸ್

ಮೆ. ಯುನೈಟೆಡ್ ಇಂಡಿಯ ಬೋರ್‌ವೆಲ್ಸ್

ಮೆ. ವಸಂಜನ್ ಬೋರ್‌ವೆಲ್ಸ್ ಕಂಪನಿ.

ಮೆ. ಸಹ್ಯಾದ್ರಿ ಬೋರ್‌ವೆಲ್ಸ್.

ಮೆ. ಸೂಜಿಮಲ್ಲೇಶ್ವರ ಸ್ವಾಮಿ ಬೋರ್‌ವೆಲ್ಸ್

ಮೆ. ಸಾಗರ್ ಬೋರ್‌ವೆಲ್ಸ್

ಮೆ. ತುಳಸಿ ಇರಿಗೇಷನ್ಸ್

ಮೆ. ಕೆ.ಆರ್.ಪಿ. ಡ್ರಿಲ್ಲಿಂಗ್ ಕಾಂಟ್ರಾಕ್ಟರ್ಸ್

ಮೆ. ವಿಜಯಲಕ್ಷ್ಮಿ ಬೋರ್‌ವೆಲ್ಸ್

ಮೆ. ಕೃಷ್ಣ ವಾಟರ್ ವೆಲ್ಸ್

ಮೆ. ಸಿದ್ದಲಿಂಗೇಶ್ವರ ಡ್ರಿಲ್ಲರ್ಸ್

ಮೆ. ಶ್ರೀನಿವಾಸ ಬೋರ್‌ವೆಲ್ಸ್

ಖಾಸಗಿ ಕಂಪನಿಗಳು ಐ.ಎಸ್.ಐ. ಮಾನ್ಯತೆ ಹೊಂದಿರುವ ಬಜಾಜ್, ಆಟ್ಲಾಂಟ ಮತ್ತು ವಾಟರ್‌ಮನ್ ಪಂಪ್‌ಸೆಟ್‌ಗಳನ್ನೂ ಕರ್ನಾಟಕ ಕೃಷಿ ಕೈಗಾರಿಕಾ ನಿಗಮವು ತನ್ನ ರೇಟ್ ಕಂಟ್ರಾಕ್ಟ್ ಆಧಾರದ ಮೇಲೆ ಯಾವುದೇ ಐ.ಎಸ್.ಐ. ಮಾನ್ಯತೆ ಪಡೆದ ಪಂಪ್‌ಸೆಟ್ಟನ್ನೂ ಅಳವಡಿಸುತ್ತದೆ

ಈ) ಇಂತಹ ಪ್ರಕರಣಗಳಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನಿಗಮವೇ ಪಲಾನುಭವಿಯ ಸಾಲದ ಹಣದ ಪೂರ್ತವನ್ನು ಆತನ ಸಾಲದ ಲೆಕ್ಕಕ್ಕೆ ಜಮಾ ಮಾಡಲು ಬ್ಯಾಂಕಿಗೆ ಭರಿಸುತ್ತದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ಬೋರ್‌ವೆಲ್ ಏಜನ್ಸಿ ಹೆಸರು	ಕೊರೆದ ಬಾವಿಗಳ ಸಂಖ್ಯೆ	ಒಟ್ಟು
೧	೨	೩	೪	೫
೧	ಮೈಸೂರು	ಅ) ಮೆ. ರಿಗ್‌ವೆಲ್ ಇಂಜಿನಿಯರ್ಸ್	೭೪	
		ಆ) ಮೆ. ಕೃಷ್ಣವೇಣಿ ಬೋರ್‌ವೆಲ್ಸ್	೨೩	
		ಇ) ಮೆ. ಯುನೈಟೆಡ್ ಇಂಡಿಯಾ ಬೋರ್‌ವೆಲ್ಸ್	೧೭	
		ಈ) ಮೆ. ಮಹಜನ್ ಬೋರ್‌ವೆಲ್ ಕಂಪನಿ	೩೮	
		ಉ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	೧೯೨	
			———	೩೩೩
೨	ಚಿತ್ರದುರ್ಗ	ಅ) ಮೆ. ಯುನೈಟೆಡ್ ಇಂಡಿಯಾ ಬೋರ್‌ವೆಲ್	೩೨	
		ಆ) ಮೆ. ಸಹ್ಯಾದ್ರಿ ಬೋರ್‌ವೆಲ್ಸ್	೦೭	
		ಇ) ಮೆ. ಕೃಷ್ಣವೇಣಿ ಬೋರ್‌ವೆಲ್ಸ್ ಕಂಪನಿ	೧೯	
		ಈ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	೧೪೪	
		ಉ) ಮೆ. ಸೂಜಿ ಮಲ್ಲೀಶ್ವರ ಡ್ರಿಲ್ಲಿಂಗ್ ಕಂಪನಿ	೦೪	
		ಎ) ಮೆ. ಮಹಾಜನ್ ಬೋರ್‌ವೆಲ್ ಕಂಪನಿ	೦೩	
		ಏ) ಮೆ. ಸಾಗರ್ ಬೋರ್‌ವೆಲ್	೦೩	
			———	೨೧೨
೩	ಕೋಲಾರ	ಅ) ಮೆ. ರಿಗವೆಲ್ ಇಂಜಿನಿಯರ್ಸ್	೨೪	
		ಆ) ಮೆ. ತುಳಸಿ ಇರ್ರಿಗೇಷನ್ಸ್	೩೫	
		ಇ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	೭೭	
			———	೧೩೬
೪	ಬಿಜಾಪುರ	ಅ) ಮೆ. ರಿಗ್‌ವೆಲ್ ಇಂಜಿನಿಯರ್	೬೬	
		ಆ) ಮೆ. ಕೃಷ್ಣವೇಣಿ ಬೋರ್‌ವೆಲ್ಸ್	೧೨	
		ಇ) ಮೆ. ಕೆಆರ್‌ಪಿ ಡ್ರಿಲ್ಲಿಂಗ್ ಕಂಟ್ರಾಕ್ಟರ್	೧೦	
		ಈ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	೬೮	
			———	೧೫೬

೧	೨		೩	೪	೫
೫	ಹಾಸನ	ಅ)	ಮೆ. ಮಹಾಜನ್ ಬೋರ್‌ವೆಲ್ ಕಂಪನಿ	೬೩	
		ಆ)	ಮೆ. ರಿಗ್‌ವೆಲ್ ಇಂಜಿನಿಯರ್ಸ್	೦೪	
		ಇ)	ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	೪೬	
				———	೧೧೩
೬	ಶಿವಮೊಗ್ಗ	ಅ)	ಮೆ. ರಿಗ್‌ವೆಲ್ ಇಂಜಿನಿಯರ್ಸ್	೧೦	
		ಆ)	ಮೆ. ಮಹಾಜನ್ ಬೋರ್‌ವೆಲ್ ಕಂಪನಿ	೫೦	
		ಇ)	ಮೆ. ವಿಜಯಲಕ್ಷ್ಮಿ ಬೋರ್‌ವೆಲ್	೧೦	
		ಈ)	ಕೃಷ್ಣಾ ವಾಟರ್‌ವೆಲ್ಸ್	೦೫	
		ಎ)	ಮೆ. ಸೂಜಿಮಲ್ಲೇಶ್ವರ ಡ್ರಿಲ್ಲಿಂಗ್ ಕಂಪನಿ	೧೬	
		ಏ)	ಮೆ. ಸಹ್ಯಾದ್ರಿ ಬೋರ್‌ವೆಲ್ಸ್	೧೭	
		ಐ)	ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	೧೨೮	
				———	೨೩೬
೭	ಬೆಳಗಾವಿ	ಅ)	ಮೆ. ಮಹಾಜನ್ ಬೋರ್‌ವೆಲ್‌ಕಂಪನಿ	೦೬	
		ಆ)	ಮೆ. ಸಿದ್ದಲಿಂಗೇಶ್ವರ ಡ್ರಿಲ್ಲರ್ಸ್	೩೯	
		ಇ)	ಮೆ. ಶ್ರೀನಿವಾಸ ಬೋರ್‌ವೆಲ್ಸ್	೩೩	
		ಈ)	ಮೆ. ರಿಗ್‌ವೆಲ್ ಇಂಜಿನಿಯರ್ಸ್	೫೦	
		ಉ)	ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	೩೦	
				———	೧೫೮
೮	ಗುಲ್ಬರ್ಗಾ	ಅ)	ಮೆ. ಮಹಾಜನ್ ಬೋರ್‌ವೆಲ್ ಕಂಪನಿ	೧೩	
		ಆ)	ಮೆ. ಯುನೈಟೆಡ್ ಇಂಡಿಯಾ ಬೋರ್‌ವೆಲ್ ಕಂಪನಿ	೦೫	
		ಇ)	ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	೮೩	
				———	೧೦೧
					———
					೧೪೪೫

ಶ್ರೀ ಕೆ. ಶಿವಮೂರ್ತಿ.—ಈಗ ಎಸ್.ಸಿ, ಎಸ್.ಟಿ. ಕಾರ್ಪೊರೇಷನ್‌ನಿಂದ ಹಾಕಿರತಕ್ಕಂಥ ಕೊಳವೆ ಬಾವಿಗಳು ೧೫೯, ರಿಪೇರಿಯಾಗದೆ ಮುಸ್ಥಿತಿಯಲ್ಲಿರತಕ್ಕಂಥಾದ್ದು ೫೧ ಎಂದು ಹೇಳಿದ್ದೀರಿ. ೧೭ ಡೀಫಂಕ್ಟ್ ಆಗಿವೆ, ನಿರ್ಲಕ್ಷಿವೆ ಎಂದು ಹೇಳಿದ್ದೀರಿ. ಈಗ ಇದು ನಿಂತು ಹೋಗಿರಲಿಕ್ಕೆ ಕಾರಣ ಏನು ಸ್ವಾಮಿ. ಎಸ್. ಸಿ. ಎಸ್. ಟಿ. ಕಾರ್ಪೊರೇಷನ್‌ನವರು ಪರ್ಚೇಸ್ ಮಾಡಿರತಕ್ಕ ಸಾಮಾನುಗಳು ಬೇರೆ ಎಂದು ಕಾಣುತ್ತದೆ. ಅವರು ರೇಟ್ ಕಾಂಟ್ರಾಕ್ಟ್ ಮೂಲಕ ಆಟ್ಲಾಂಟ್ ಮತ್ತು ವಾಟರ್‌ಮನ್ ಪಂಪುಸೆಟ್ಟುಗಳನ್ನು ಹಾಕುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ವಾಸ್ತವಿಕ ಸ್ಥಿತಿ ಬೇರೆ ಇದೆ. ಆಟ್ಲಾಂಟ್ ಮಿಷಿನ್‌ಗಳನ್ನು ಹಾಕುತ್ತಾ ಇಲ್ಲ. ನಮ್ಮ ಬದಿಯನಾಯಕತಾಂಡ ಎಂದು ಹೇಳತಕ್ಕಂಥ ಊರಿನಲ್ಲಿ ಆಟ್ಲಾಂಟ್ ಹಾಕಲೇ ಇಲ್ಲ. ಇದು ಒಂದು ಉದಾಹರಣೆ. ಆಟ್ಲಾಂಟ್ ಮತ್ತು ವಾಟರ್‌ಮನ್ ಪಂಪಾಸೆಟ್‌ಗಳನ್ನು ಬಿಟ್ಟು ಬೇರೆ ಸಾಮಾನುಗಳನ್ನು ಹಾಕುತ್ತಾ ಇದ್ದಾರೆ. ಅದು ಒಂದು. ಆಮೇಲೆ ಬೋರ್‌ವೆಲ್‌ಗಳು ಕೆಟ್ಟು ಹೋದರೆ ಈ ಬೆನಿಫಿಷರೀಸ್ ಇಲ್ಲಿಂದ ಬೆಂಗಳೂರಿನವರಿಗೆ ಹೇಳಬೇಕು, ಅದು ಬೆಂಗಳೂರು ತಲುಪಿದ

ಮೇಲೆ ಅವರು ಏಜೆನ್ಸಿಗೆ ಬರೆದ ಮೇಲೆ ಅವರು ಅದನ್ನು ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಇದೆ. ಅಲ್ಲಿಯವರೆಗೆ ಬೆಳೆ ಹಾಳಾಗುತ್ತದೆ. ಯಾರು ಬೆನಿಫಿಷರೀಸ್ ಶೇಂಗಾ ಬೆಳೆ ಹಾಕಿಕೊಂಡಿದ್ದಾರೋ ಅವರು ಇಲ್ಲಿ ಬೆಂಗಳೂರಿಗೆ ಇನ್‌ಫಾರಂ ಮಾಡತಕ್ಕಂಥ ವ್ಯವಸ್ಥೆಯನ್ನು ತಪ್ಪಿಸಿ ಲೋಕಲ್ಲಾಗಿ ಸರಿ ಮಾಡತಕ್ಕಂಥ ವ್ಯವಸ್ಥೆ ಆಗಬೇಕು. ಈ ಎರಡು ಪ್ರಶ್ನೆಗಳನ್ನು ಮಾನ್ಯ ಸಚಿವರಿಗೆ ಕೇಳುತ್ತಾ ಇದ್ದೇನೆ.

ಶ್ರೀ ಬಿ. ಶಿವಣ್ಣ.—ಈ ನಮ್ಮ ನಿಗಮದಿಂದ ಗುತ್ತಿಗೆಗಳನ್ನು ಕೊಡುತ್ತೇವೆ. ಬೇರೆ ಪೈವೇಟ್ ಏಜೆನ್ಸಿಗೆ ಕೂಡ ಕೊಡುತ್ತೇವೆ. ಅವರಿಗೆ ಆ ಪ್ರಕಾರ ಗ್ರಾಂಟ್ ಕೂಡ ಆಗುತ್ತದೆ. ಪೈವೇಟ್ ಏಜೆನ್ಸಿಗಳು ಮತ್ತು ಕೆ.ಐ.ಎಸ್. ಮುಖಾಂತರ ಮಾಡುತ್ತಾ ಇದ್ದೇವೆ.

ಶ್ರೀ ಕೆ. ಶಿವಮೂರ್ತಿ.—ಖರೀದಿ ಮಾಡಿರತಕ್ಕ ಸಾಮಾನುಗಳು ಅದೇ ಪ್ರಕಾರ ಇದೆಯೇ? ಅಟ್ಲಾಂಟ್ ಮಿಷಿನ್ ಎಂದು ತಿಳಿಸಿದ್ದೀರಿ, ಅಟ್ಲಾಂಟ್ ಮಿಷಿನ್ ಹಾಕಲೇ ಇಲ್ಲ. ಇದಕ್ಕೆ ಬ್ಯಾಂಕ್‌ನವರೂ ಕೂಡ ಅಬ್ಜೆಕ್ಟ್ ಮಾಡಿದ್ದಾರೆ. ಅವನ ರೈಟ್ ಪ್ರಕಾರ, ಇನ್‌ಸ್ಟ್ರಕ್ಷನ್ ಪ್ರಕಾರ, ಗೈಡ್‌ಲೈನ್ಸ್ ಪ್ರಕಾರ ಅಟ್ಲಾಂಟ್ ಮಿಷಿನ್ ಹಾಕಬೇಕು ಎಂದು ಇದೆ ಅದನ್ನು ಅವರು ತರಲಿಲ್ಲ. ಬೇರೆ ಮಿಷಿನ್‌ಗಳನ್ನು ತಂದು ಹಾಕುತ್ತಾ ಇದ್ದಾರೆ. ಕಳಪೆ ಸಾಮಾನುಗಳನ್ನು ತಂದು ಹಾಕುವುದರಿಂದ ಎಸ್.ಸಿ. ಎಸ್.ಟಿ. ಕಾರ್ಪೊರೇಷನ್ ಪತಿಯಿಂದ ಹಾಕಿದಂಥ ಬೋರ್ವೆಲ್‌ಗಳು ಪೂರ್ತಿಯಾಗಿ ಡೀಫಂಕ್ಟ್‌ಗಿ ನಿಂತು ಹೋಗಿವೆ. ಹೀಗೆ ನಿಂತಿರತಕ್ಕ ಬೋರ್ವೆಲ್‌ಗಳನ್ನು ರಿಪೇರಿ ಮಾಡಲಿಕ್ಕೆ ಒಂದೊಂದು ವರ್ಷ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಇದನ್ನು ಸರಿ ಮಾಡಲಿಕ್ಕೆ ಏನು ಮಾಡುತೀರಿ ಎಂದು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಅಟ್ಲಾಂಟ್ ಕಂಪನಿ ಏನಿದೆ ಅದು ಮಾನ್ಯತೆ ಪಡೆದಿರತಕ್ಕಂಥಾದ್ದು, ನಾವು ಕಂಪ್ಲೆಂಟ್ ಇದ್ದರೆ ಹೇಳಿ ಅದನ್ನು ಸರ್ಕಾರ ನೋಡುತ್ತದೆ.

ಶ್ರೀ ಕೆ. ಶಿವಮೂರ್ತಿ.—ಅವರು ಪರ್ಚೇಸ್ ಮಾಡಿರತಕ್ಕ ಸಾಮಾನುಗಳು ಇದೆಯೆಲ್ಲಾ ಅದು ಆ ಕಂಪನಿಯದು ಅಲ್ಲ. ಆದನ್ನೇ ಬ್ಯಾಂಕ್‌ನವರು ಅಬ್ಜೆಕ್ಟ್ ಮಾಡಿದ್ದಾರೆ.

ಶ್ರೀ ಬಿ. ಶಿವಣ್ಣ.—ಇದು ಅಟ್ಲಾಂಟ್ ಕಂಪನಿಯದು. ಆ ಕಂಪನಿಯವರು ನಮಗೆ ಸಪ್ಲೈ ಮಾಡುತ್ತಾರೆ. ಆ ಪ್ರಕಾರ ನಾವು ಯೂಸ್ ಮಾಡುತ್ತೇವೆ. ತಮಗೆ ಎಲ್ಲಾದರೂ ತೊಂದರೆಯಾಗಿದ್ದರೆ ತಿಳಿಸಿ.

ಶ್ರೀ ಕೆ. ಶಿವಮೂರ್ತಿ.—ಬೋರ್ವೆಲ್ ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಏನಿದೆ ಅದನ್ನು ಲೋಕಲ್ಲಾಗಿ ಏಕೆ ಮಾಡಬಾರದು. ಬೆಂಗಳೂರಿಗೆ ಏಕೆ ಕಳಿಸಬೇಕು. ಇದರಿಂದ ಒಂದೊಂದು ವರ್ಷ ರಿಪೇರಿ ಮಾಡುವುದಕ್ಕೆ ಲೇಟಾಗುತ್ತದೆ. ಇದರ ಬಗ್ಗೆ ಏನು ಹೇಳುತ್ತೀರಿ.

ಶ್ರೀ ಬಿ. ಶಿವಣ್ಣ.—ಒಮ್ಮೆ ಬಾವಿ ಕೊರೆದು ಅವರಿಗೆ ಕೊಟ್ಟಮೇಲೆ ರಿಪೇರಿ ಮಾಡುವುದಕ್ಕೆ ಒಂದು ವರ್ಷ ಗ್ಯಾರಂಟಿ ಇರುತ್ತದೆ. ಸಾಮಾನ್ಯವಾಗಿ ಏನಾದರೂ ಆಯಿತು ಅಂದರೆ ರಿಪೇರಿ ಮಾಡುತ್ತೇವೆ. ಆಮೇಲೆ ಕೂಡ ತೊಂದರೆಯಾಯಿತು ಎಂದು ಕಂಪ್ಲೆಂಟ್ ಮಾಡಿದರೆ ಅಲ್ಲಲ್ಲೇ ನಿಗಮದಿಂದ ಸಹಾಯ ಮಾಡುತ್ತಾರೆ.

ಶ್ರೀ ಕೆ. ಶಿವಮೂರ್ತಿ.—ರಿಪೇರಿ ಮಾಡುವುದಕ್ಕೆ ಒಂದು ವರ್ಷ ಕಾಲ ತೆಗೆದುಕೊಳ್ಳುತ್ತಾರೆ. ಲೋಕಲ್ಲಾಗಿ ಏಕೆ ರಿಪೇರಿ ಮಾಡಿಸುವುದಿಲ್ಲ. ಬೆಳೆ ಹಾಳಾಗುತ್ತದೆ, ಆದ್ದರಿಂದ ಲೋಕಲ್ಲಾಗಿ ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಮಾಡಿ, ಇಲ್ಲಿ ಬೆಂಗಳೂರಿಗೆ ಏಕೆ ಬರಬೇಕು. ಮ್ಯಾನೇಜಿಂಗ್ ಡೈರೆಕ್ಟರ್ ಅಪ್ರೂವಲ್ ಏಕೆ ತೆಗೆದುಕೊಳ್ಳಬೇಕು,

ಶ್ರೀ ಬಿ. ಶಿವಣ್ಣ.—ಅದನ್ನು ಸರ್ಕಾರದಲ್ಲಿ ವಿಚಾರ ಮಾಡುತ್ತೇವೆ.

ಕೋಲಾರ ಜಿಲ್ಲೆಯ ವಡ್ಡಹಳ್ಳಿ ಗ್ರಾಮದ ಬಳಿ ಉಕ್ಕಡ ಕಚೇರಿ ಪ್ರಾರಂಭ

೨೧೦. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ವಡ್ಡಹಳ್ಳಿ ಗ್ರಾಮದ ಹತ್ತಿರ ತನಿಖಾ ಠಾಣೆಯನ್ನು ತೆರೆದಿರುವುದೇ ?